ಶ್ರೀ ಎಂ ಎಂ ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ 2003–04ನೇ ಸಾಲಿನಲ್ಲಿ 3670 ಚಿಲ್ಲರೆ ಮದ್ಯದ ಅಂಗಡಿಗಳು (ಸಿಎಲ್–2) ಮತ್ತು 3381 ಬಾರ್ ಮತ್ತು ರೆಸ್ಟೋರೆಂಟ್‌ಗಳು (ಸಿಎಲ್–9) ನವೀಕೃತ ಸನ್ನದುಗಳಿವೆ

ಆ) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರ ನಿಯಮ 4ರ ಅನ್ವಯ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಸನ್ನದು ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬೇಕಗಿರುತ್ತದೆ ಇಂತಹ ಅರ್ಜಿಗಳನ್ನು ಪರಿಶೀಲಿಸಿ ಕೋಟಾದನ್ವಯ ಅರ್ಜಿದಾರರ ಜೇಷ್ಟತೆ ಆಧಾರದ ಮೇಲೆ ಸನ್ನದನ್ನು ನೀಡಲಾಗುವುದು ಉದ್ದೇಶಿತ ಸನ್ನದು ಮಳಿಗೆಯು ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5 ರ ಅನ್ವಯ ಆಕ್ಷೇಪಣಾ ರಹಿತ ಸ್ಥಳವಾಗಿರಬೇಕಾದ ನಿರ್ಭಂಧವಿರುತ್ತದೆ

ಇ) ಅಂತರದ ಬಗ್ಗೆ ನಿರ್ಭಂದವಿರುವುದಿಲ್ಲ

ಈ) ಮೇಲಿನ ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ರೈತರ ವಿದ್ಯುತ್ ಸಮಸ್ಯೆಯ ಪರಿಹಾರದ ಬಗ್ಗೆ

88 (14) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ನಂತರ ಹಾಲಿ ವರ್ಷದಲ್ಲಿ ಆಗಿರುವ ಅಲ್ಪಮಳೆಯಿಂದ ಕೃಷಿಗಾಗಿ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆಯೇ

ಆ) ವಿದ್ಯುತ್ ಕೊರತೆ ಇದ್ದಲ್ಲಿ ಸರ್ಕಾರ ಕಂಡುಕೊಂಡ ಪರ್ಯಾಯ ವ್ಯವಸ್ಥೆ ಯೇನು

ಇ) ಮೀನುಗಾರರ ದೋಣಿಗಳಿಗೆ ರಿಯಾಯಿತಿ ದರದಲ್ಲಿ ಇಂಧನ ನೀಡುತ್ತಿರುವ ರೀತಿಯಲ್ಲೇ ರೈತರಿಗೂ ಸಹ ರಿಯಾಯಿತಿ ದರದಲ್ಲಿ ಇಂಧನ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ ಈ ಕುರಿತು ಸರ್ಕಾರದ ನಿಲುವು ಏನು

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹಾಲಿ ವರ್ಷದಲ್ಲಿ ಅಲ್ಪ ಮಳೆಯಾಗಿದ್ದರೂ ಸಹ ರೈತರ ಪಂಪ್ ಸೆಟ್‌ಗಳಿಗೆ ಸಾಧ್ಯವಾದಷ್ಟೂ ವಿದ್ಯುತ್ ಪೂರೈಸಲಾಗುತ್ತಿದೆ

ಆ) ಪ್ರಸ್ತುತ ರಾಜ್ಯದಲ್ಲಿ ಸುಮಾರು 3000 ಮಿ ಯೂ ಗಳಷ್ಟು ವಿದ್ಯುತ್‌ನ ಕೊರತೆ ಇದೆ ಆದರೂ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಳ್ಳಲು, ಅಲ್ಪಾವಧಿ ಕ್ರಮವಾಗಿ ಪವರ್ ಟ್ರೇಡಿಂಗ್ ಕಾರ್ಪೋರೇಷ್‌ನ್ ನಿಂದ ಹಾಗೂ ಎನ್ ಟಿ ಪಿ.ಸಿ ರಾಷ್ಟ್ರೀಯ ವಿದ್ಯುತ್ ವ್ಯಾಪಾರ ನಿಗಮದಿಂದ ವಿದ್ಯುತ್‌ನ್ನು ಖರೀದಿಸಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆಗೊಳಿಸುವ ಪರ್ಯಾಯ ಕ್ರಮವನ್ನು ಸರ್ಕಾರ ತೆಗೆದುಕೊಂಡಿರುತ್ತದೆ

ಇ) ಅಂತಹ ಪ್ರಸ್ತಾವನೆ ಇರುವುದಿಲ್ಲ

ರಾಜ್ಯದಲ್ಲಿ ಗ್ರಾಮೀಣಾ ಕೃಪಾಂಕ ನೌಕರರ ಮರು ನೇಮಕಾತಿಯ ಬಗ್ಗೆ

40 (69) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮೀಣ ಕೃಪಾಂಕ ನೌಕರರ ಮರು ನೇಮಕಾತಿಗೆ ರಚಿಸಲಾಗಿರುವ ವಿಶೇಷ ನೇಮಕಾತಿ ನಿಯಮದ ಆಧಾರದ ಮೇಲೆ ಎಷ್ಟು ಅಭ್ಯರ್ಥಿಗಳನ್ನು ಮರುನೇಮಕಾತಿ ಮಾಡಿಕೊಳ್ಳಲಾಗಿದೆ

ಆ) ಈ ವಿಶೇಷ ನೇಮಕಾತಿ ನಿಯಮಾವಳಿಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದರ ಹಿನ್ನೆಲೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಲಭ್ಯವಿರುವ ಮಾಹಿತಿ ಪ್ರಕಾರ ಕರ್ನಾಟಕ ಸಿವಿಲ್ ಸೇವೆಗಳು (ಗ್ರಾಮೀಣ ಕೃಪಾಂಕದ ಸೌಲಭ್ಯದೊಂದಿಗೆ ನೇಮಕಾತಿ ಹೊಂದಿದ ನೌಕರರ ವಿಲೀನಾತಿ) ವಿಶೇಷ) ನಿಯಮಗಳು 2003ರ ಅನ್ವಯ' ಸುಮಾರು 4400 ಅಭ್ಯರ್ಥಿಗಳನ್ನು ಮರುನೇಮಕ ಮಾಡಿಕೊಳ್ಳಲಾಗಿದೆ

ಇ) ಸರ್ವೋಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಡತೆಯಾಜ್ಞೆಯ ಹಿನ್ನೆಲೆಯಲ್ಲಿ ಮೇಲ್ಕಂಡ ವಿಶೇಷ ನಿಯಮಗಳಡಿ ಮುಂದಿನ ಆದೇಶದವರೆಗೆ ಯಾವುದೇ ನೇಮಕಾತಿಯನ್ನು ಮಾಡಬಾರದೆಂದು ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಮೇಲ್ಕಂಡ ನಿಯಮಗಳನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಸಮರ್ಥಿಸಿಕೊಳ್ಳಲು ಮತ್ತು ಮಧ್ಯಂತರ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಕೈಗೊಳ್ಳುವ ಬಗ್ಗೆ

42 (21) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆ ಕೈಗೊಳ್ಳುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಎಂದು ಕಳುಹಿಸಲಾಯಿತು? ಹಾಗೂ ಈಗ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ

ಆ) ನಗರಸಭೆ ತುಂಬಬೇಕಾದ ವಂತಿಗೆಯನ್ನು ತುಂಬಲು ನಗರಸಭೆಗೆ ಆಗದೇ ಇರುವುದರಿಂದ ಹುಡ್ಕೋದಿಂದ ಸರ್ಕಾರ ಸಾಲ ಕೂಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಬೈಲಹೊಂಗಲ ನಗರದ ಹಳೆಯ ಒಳಚರಂಡಿ ನೀರು ಮಲಪ್ರಭಾ ನದಿಗೆ ಸೇರುತ್ತಿದ್ದು, ಅಲ್ಲಿನ ಪರಿಸರ ನಾಶವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ ಅದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ನಗರಸಭೆಯವರು ತುಂಬಬೇಕಾದ ವಂತಿಗೆಯನ್ನು ತುಂಬಲು ಸರ್ಕಾರದ ಹಣಕಾಸಿನ ಸಂಸ್ಥೆಗಳಿಂದ ಸಾಲ ರೂಪವಾಗಿ ಹಣ ಕೂಡಿಸುವ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಸದರಿ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಇನ್ನೂ ಸಲ್ಲಿಸಿರುವುದಿಲ್ಲ 589 00 ಲಕ್ಷ ರೂ ಗಳ ಯೋಜನೆಯನ್ನು ತಯಾರಿಸಿದ್ದು, ಯೋಜನೆಯ ಆರ್ಥಿಕ ಮಾದರಿಯಂತ ಸ್ಥಳೀಯ ಸಂಸ್ಥೆಯು ಭರಿಸಬೇಕಾಗಿರುವ 117 80 ಲಕ್ಷ ರೂ ಗಳ ವಂತಿಗೆಯ 1/3 ಭಾಗವನ್ನು ಭರಿಸಲು ಸ್ಥಳೀಯ ಸಂಸ್ಥೆಯನ್ನು ಕೋರಲಾಗಿದೆ ರೇವಣಿ ಯಿಟ್ಟ ನಂತರ ಮುಂದಿನ ಕ್ರಮ ಜರುಗಿಸಲಾಗುವುದು